# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆ.ಆರ್.ಪುರ ಉಪ ವಲಯ, ಮಹದೇವಪುರ ವಲಯ, ಬೆಂಗಳೂರು–560036.

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಕೆ.ಆರ್.ಪಿ.ಉವ/ಪಿಆರ್/ /2022–23 ದಿನಾಂಕ: 17–12–2022

ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020–21 ದಿನಾಂಕ: 21–09–2020 ರಂತೆ ದಿನಾಂಕ: 17–12–2022ರಂದು ಹೊಸ ವಾರ್ಡ್ ಸಂಖ್ಯೆ:88 ಬಸವನಪುರ ವಾರ್ಡ್ ಕಮಿಟಿ ಸಭೆಯನ್ನು ವಾರ್ಡ್ ಕಛೇರಿಯಲ್ಲಿ ನೋಡಲ್ ಅಧಿಕಾರಿಗಳು ಹಾಗೂ ಶ್ರೀ.ಕೇಶವ್, ಸಹಾಯಕ ಅಭಿಯಂತರರು ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:

## "ಸಭೆಯಲ್ಲಿ ಚರ್ಚಿಸಲಾದ ವಿಷಯಗಳು"

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 1 | ವಾರ್ಡ್ ಮಟ್ಟದಲ್ಲಿ ಘನ ತ್ಯಾಜ್ಯ ನಿರ್ವಹಣೆ ಬಗ್ಗೆ. | ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಹಾಗೂ ವಾಡ್ ಮಟ್ಟದ ಕಾರ್ಯದರ್ಶಿಗಳು ಸಭೆಯನ್ನು ಕುರಿತು ಮಾತನಾಡುತ್ತಾ, ನಿವಾಸಿಗಳು ಘನತ್ಯಾಜ್ಯವನ್ನು ಪ್ರತಿ ದಿನ ಸಂಗ್ರಹಿಸುವ ಬಗ್ಗೆ ಕೋರಿದರು. ವಾರ್ಡ್ ಮಟ್ಟದಲ್ಲಿ ಘನ ತ್ಯಾಜ್ಯ ರಸ್ತೆಗಳಲ್ಲಿ ಮನೆಯ ಬದಿಯ ರಸ್ತೆಗಳಲ್ಲಿ ಕಸವನ್ನು ತೆಗೆಯದೇ ಅಲ್ಲಿಯೇ ಬಿಟ್ಟಿರುವುದು ಹಾಗೂ ಕಾಲಕಾಲಕ್ಕೆ ತ್ಯಾಜ್ಯವನ್ನು ಸಂಗ್ರಹಣೆ ಮಾಡುವ ವಾಹನಗಳು ವಾರ್ಡ್ ರಸ್ತೆಗಳಲ್ಲಿ ಬರುವಾಗ ಮೈಕ್‌ನ್ನು ಅಳವಡಿಸದೇ ಬರುವುದರಿಂದ ಅಲ್ಲಿನ ಸಾರ್ವಜನಿಕರು ಕಸವನ್ನು ರಸ್ತೆ ಬದಿಯಲ್ಲಿ ಸುರಿದು ಹೋಗುವುದರಿಂದ, ಆ ತ್ಯಾಜ್ಯದಿಂದ ರೋಜ–ರುಜುನುಗಳು ಹರುಡುವಿಕೆ ಹೆಚ್ಚಾಗುವ ಕಾರಣಕ್ಕೆ ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮಕಾರಿಯಾಗಿ ಬೀರುತ್ತವೆ ಎಂದು ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು. ಹಾಗೂ ವಾರ್ಡ್‌ಗಳಲ್ಲಿ ಅಲ್ಲಲ್ಲಿ ಕಸದ ರಾಶಿ(ಬ್ಲಾಕ್ ಸ್ಪಾಟ್)ಯನ್ನು ಹಾಕಿರುವುದನ್ನು ತೆರವಗೊಳಿಸಲು ಸೂಚಿಸಲಾಯಿತು. ಸದರಿ ವಿಷವನ್ನು ಉದ್ದೇಶಿಸಿ ಕಿರಿಯ ಆರೋಗ್ಯಾಧಿಕಾರಿಗಳು ಮಾತನಾಡುತ್ತಾ, ಸಾರ್ವಜನಿಕರ ಸಮಸ್ಯೆಗಳನ್ನು ಕೂಡಲೇ ಭಗೆಹರಿಸಿ ಇಂತಹ ಸಮಸ್ಯೆ ಮರುಕಳಿಸದಂತೆ ಮುನ್ನೆಚ್ಚರಿಕೆ ಕ್ರಮವನ್ನು ವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು. |
| 2 | ಬೀದಿ ದೀಪಗಳ ನಿರ್ವಹಣೆ ಬಗ್ಗೆ. | ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಹಾಗೂ ವಾರ್ಡ್ ಮಟ್ಟದ ಕಾರ್ಯದರ್ಶಿಗಳು ಸಭೆಯನ್ನು ಕುರಿತು ಮಾತನಾಡುತ್ತಾ, ವಾರ್ಡ್‌ಗಳಲ್ಲಿ ಕೆಲವೊಂದು ಬೀದಿ ದೀಪಗಳು ಉರಿಯದೇ ಇರುವುದರಿಂದ, ಹಾಗೂ ಕೆಲವೊಂದ ಕಡೆ ಬೀದಿ ದೀಪಗಳು ಇರುವುದಿಲ್ಲ ಆದ್ದರಿಂದ ವಾರ್ಡ್ ಮಟ್ಟದಲ್ಲಿ ಹಲವಾರು ಸಮಸ್ಯೆಗಳು ಉದ್ಭವವಾಗಿರುತ್ತದೆ. ಇದರಲ್ಲಿ ಪ್ರಮುಖವಾಗಿ ಸರಗಳ್ಳತನಗಳು ಹಾಗೂ ಪುಂಡ ಪೋಕರಿಗಳ ಆವಳಿಗಳು ಸಂಭವಿಸುತ್ತಿರುವ ಬಗ್ಗೆ ತಿಳಿಸಿದರು. ಇದಕ್ಕೆ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರು ಮಾತನಾಡುತ್ತಾ ಬೀದಿ ದೀಪ ನಿರ್ವಹಣೆ ಮಾಡುವ ಗುತ್ತಿಗೆದಾರಿಂದ ಕಾಲಕಾಲಕ್ಕೆ ಬೀದಿ ದೀಪಗಳ ನಿರ್ವಹಣೆಯನ್ನು ನಿರ್ವಹಿಸಿ ಮತ್ತು ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಲು ಸೂಚಿಸಿ, ಮುಂದಿನ ದಿನಗಳಲ್ಲಿ ಇಂತಹ ತೊಂದರೆಗಳು ಆಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. |

| | | |
|---|---|---|
| 3. | ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಅಗೆದಿರುವ ರಸ್ತೆಗಳನ್ನು ಪುನಶ್ಚೇತಗೊಳಿಸುವ ಬಗ್ಗೆ. | ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ಒಳಚರಂಡಿ ಸಂಪರ್ಕ ಮತ್ತು ಕುಡಿಯುವ ನೀರಿನ ಸಮರ್ಪಕ ಸರಬರಾಜುಗಾಗಿ ಕೈಗೊಂಡಿರುವ ಅನೇಕ ಕಾಮಗಾರಿಗಳನ್ನು ಕೈಗೊಂಡು ಅಗೆದಿರುವ ರಸ್ತೆಗಳನ್ನು ಪುನಶ್ಚೇತಗೊಳಿಸದೇ ಅನೇಕ ಕಡೆ ಹಾಗೆಯೇ ಬಿಟ್ಟಿರುವುದು ಕಂಡು ಬಂದಿರುತ್ತದೆ. ಇದರಿಂದ ವಾರ್ಡ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಸಮಸ್ಯೆಯಾಗುತ್ತಿದ್ದು, ಆದರಿಂದ ರಸ್ತೆಯನ್ನು ಪುನಶ್ಚೇತಗೊಳಿಸಲು ಹಾಜರಿದ್ದ ಸದರಿ ಅಧಿಕಾರಿಗಳಿಗೆ ತಿಳಿಸಿದರು. |
| 4. | ಪಾದಾಚಾರಿ ರಸ್ತೆ ಮಾರ್ಗವನ್ನು ತೆರವುಗೊಳಿಸುವ ಮತ್ತು ಪಾದಾಚಾರಿ ರಸ್ತೆಯಲ್ಲಿ ದುರಸ್ಥಿಯಾಗಿರುವ ಸ್ಲಾಬ್‌ಗಳನ್ನು ಅಳವಡಿಸುವ ಬಗ್ಗೆ. | ವಾರ್ಡ ವ್ಯಾಪ್ತಿಯಲ್ಲಿ ಪಾದಾಚಾರಿ ರಸ್ತೆಯಲ್ಲಿ ವಾಹನ ನಿಲುಗಡೆ ಮತ್ತು ವ್ಯಾಪಾರಿಗಳು ವ್ಯಾಪಾರ ಮಾಡುತ್ತಿರುವುದರಿಂದ ಪಾದಾಚಾರಿ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುತ್ತದೆ. ಆದ್ದರಿಂದ ಟ್ರಾಫಿಕ್ ಪೋಲೀಸ್ ಇಲಾಖೆಯವರೊಂದಿಗೆ ವಾರ್ಡ್ ಅಭಿಯಂತರರು ಸಮನ್ವಯ ಸಾಧಿಸಿ ಪಾದಾಚಾರಿ ರಸ್ತೆಯಲ್ಲಿ ವ್ಯಾಪಾರಸ್ಥರನ್ನು ತೆರವುಗೊಳಿಸಿ ಮತ್ತು ಪಾದಾಚಾರಿ ರಸ್ತೆಯಲ್ಲಿ ದುರಸ್ಥಿಯಾಗಿರುವ ಸ್ಲಾಬ್‌ಗಳನ್ನು ಅಳವಡಿಸಲು ಹಾಜರಿದ್ದ ಅಧಿಕಾರಿಯವರಿಗೆ ತಿಳಿಸಲಾಗಿದೆ. |
| 5 | ವಾರ್ಡ ವ್ಯಾಪ್ತಿಯಲ್ಲಿ ಗುಂಡಿ ಮುಕ್ತ ರಸ್ತೆಗಳನ್ನಾಗಿಸುವ ಮತ್ತು ರಸ್ತೆಗಳನ್ನು ನಿರ್ವಹಣೆ ಮಾಡುವ ಬಗ್ಗೆ. | ವಾರ್ಡ ವ್ಯಾಪ್ತಿಯ ರಸ್ತೆಗಳಲ್ಲಿ ಗುಂಡಿಗಳು ಇರುವುದರಿಂದ ವಾಹನ ಸಂಚಾಲಕರಿಗೆ ಮತ್ತು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು, ಪ್ರಾಣ ಅಪಘಾತವಾಗುವ ಸಂಭವವಿರುತ್ತದೆ. ಆದ್ದರಿಂದ ಸದರಿ ವಾರ್ಡ್ ಅಭಿಯಂತರರು ಕೂಡಲೇ ಕ್ರಮ ಕೈಗೊಳ್ಳವಂತೆ ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು. ಹಾಗೂ ರಸ್ತೆ ಬದಿಯಲ್ಲಿರುವ ಚರಂಡಿಗಳಲ್ಲಿ ಹೂಳನ್ನು ತೆಗೆದು ಮಳೆ ನೀರು ಸರಾಗವಾಗಿ ಹರಿಯಲು ಮಾಡಿಕೊಡಲು ತಿಳಿಸಿದರು. |

ವಾರ್ಡ್ ಕಮಿಟಿ ನೋಡಲ್ ಅಧಿಕಾರಿ ಮತ್ತು ಕಾರ್ಯದರ್ಶಿಗಳು, ನೌಕರರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಈ ಮೇಲ್ಕಂಡಂತೆ ತಿಳಿಸಿರುವ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಹಾಗೂ ನಿರ್ಣಯಗಳಂತೆ ಬಸವನಪುರ ವಾರ್ಡ್ ನಂ:88 ವ್ಯಾಪ್ತಿಯಲ್ಲಿ ಕೆಲಸ ಕಾರ್ಯಗಳನ್ನು ಆಧ್ಯತೆ ಮೇರೆಗೆ ನಿರ್ವಹಿಸಲು ನಿರ್ಣಯಿಸಲಾಯಿತು.

ಬಸವನಪುರ ವಾರ್ಡ ನಂ: 88 ರ ವಾರ್ಡ್ ಕಮಿಟಿಯ ಕಾರ್ಯದರ್ಶಿಗಳಾದ ಸಹಾಯಕ ಅಭಿಯಂತರರು, ರವರು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾರ್ಯನಿರ್ವಹಿಸಲು ಕೋರುತ್ತಾ, ವಂದನಾರ್ಪಣೆಯನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ನಂ: 88

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಡಿ.ಹೆಚ್.ಓ ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಸೂಕ್ತ ಮಾಹಿತಿ/ಕ್ರಮಕ್ಕಾಗಿ ಸಲ್ಲಿಸಿದೆ.
4. ಎಲ್ಲಾ ಅಧಿಕಾರಿ ಸಿಬ್ಬಂದಿಗಳ ಕ್ರಮಕ್ಕಾಗಿ.
5. ಎಲ್ಲಾ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
6. ಕಛೇರಿ ಪ್ರತಿ.